Mr. DEPUTY SPEAKER.—I call upon Smt. Nagarathnamma Hiremath.

ಶ್ರೀ ಶರಣಗೌಡ ಇನಾಂದಾರ್ (ಜವರ್ಗಿ).—ಮಾನ್ಯ ರೆವೆನ್ಯೂ ಮಂತ್ರಿಗಳೂ ಇಲ್ಲಿ ಸ್ಟೇಟ್ ಮೆಂಟ್ ಕೊಡುವಾಗ ಬೀದರ್ ಜಿಲ್ಲೆ ಬಗ್ಗೆ ಹೇಳಿದರು. ನಮ್ಮ ಗುಲ್ಬರ್ಗಾ ಜಿಲ್ಲೆಯಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ಇದು ಜವರ್ಗಿ ಹಾಗೂ ಷಹಾಬಾದುಗಳಲ್ಲಿ ಬೆಳೆಯಾಗದೇ ಬಹಳ ನಷ್ಟ ವಾಗುತ್ತಿದೆ. ಇದರ ಬಗ್ಗೆಯೂ ಮಂತ್ರಿಗಳು ಗಮನ ಕೊಡಬೇಕು.

Sri SIVAPPA (Sravanabelagola).—In today's newspaper there is a news item that the Congress Party has taken a decision regarding the most controversial matter about the levy system and that decision has appeared in newspapers. That is a subject matter which is being discussed on the floor of this House because levy has been mentioned in the Finance Minister'sspeech. So, how can the Congress Party take a decision on that and how can that decision be announced in newspapers when the Legislature is in session?

ನಾನು ಪ್ರಶ್ನೆಮಾಡತಕ್ಕದ್ದು ಈ ಸಭೆ ಇಲ್ಲಿ ನಡೆಯುತ್ತಿರುವಾಗ ಮಾನ್ಯ ಮಂತ್ರಿಗಳು ಹೀಗೆ ಪಾರ್ಟಿಯೊಳಗೆ ಹೋಗಿ ಸ್ಟೇಟ್‌ಮೆಂಟ್ ಕೊಡುವುದು ಸರಿಯಲ್ಲ. ನಮ್ಮ ಸಭೆಯಲ್ಲಿ ಮೊದಲಿಗೆ ತಿಳಿಸಿ ಆ ನಂತರ ಪತ್ರಿಕೆಯಲ್ಲಿ ಹೇಳಬೇಕು. ಈ ರೀತಿಯಾಗಿ ಮಂತ್ರಿಗಳು ಕೊಟ್ಟ ಹೇಳಿಕೆ ಇಂದು ಪತ್ರಿಕೆಗಳಲ್ಲಿ ಬಂದಿರುವುದನ್ನು ನಾನು ಓದಿದ್ದೇನೆ, ಅದಕ್ಕಾಗಿ ಇಲ್ಲಿ ತರಬೇಕಾಗಿದೆ.

ಉಪಾಧ್ಯಕ್ಷರು.—ಇವೆಲ್ಲಾ ಪಾರ್ಟಿ ವಿಚಾರಗಳು. ಪಾರ್ಟಿ ವಿಚಾರಗಳು ಇಲ್ಲಿ ಬರುವುದಿಲ್ಲ.

Sri D. M. SIDDIAH.—I rise to a point of order. The Leader of the Opposition has raised a matter which we have discussed in our Party meeting. It is exclusively a meeting of the Congress Legislature Party and its decision is not supposed to be published in any newspaper. So, I wonder how the Leader of the Opposition being himself an experienced parliamentarian can question the authority of the party to take a decision and raise a point about a decision which is not supposed to to be published in any newspaper? Nobody except the Members of the Congress Legislature Party is supposed to know that decision and I really wonder how any newspaper has published it.

BUDGET ESTIMATES FOR 1968-69

General Discussion
(Debate Continued)

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, 1968-69ನೇ ವರ್ಷದ ರಾಜ್ಯದ ಆಯವ್ಯಯ ಅಂದಾಜಿನ ವರದಿಯನ್ನು ಸ್ವಾಗತಿಸುತ್ತಾ ನಾರ್ಯಾರು ಸಲಹೆ ಗಳನ್ನು ಕೊಡಬೇಕೆಂದಿದ್ದೇನೆ. ಈ ವರದಿಯನ್ನು ಮಂಡಿಸಲು ಆರ್ಥಿಕ ಮಂತ್ರಿಗಳು ದೈಹಿಕ ಮಾನಸಿಕವಾಗಿ ತುಂಬಾ ಶ್ರಮ ವಹಿಸಿದ್ದಾರೆಂದು ನಾನು ಊಹಿಸಬಲ್ಲೆ. ಅವರ ಕರ್ತವ್ಯ ನಿಷ್ಠೆಗಾಗಿ ಅಭಿನಂದಿಸುತ್ತೇನೆ. ಅಭಿನಂದನೆ ವೈಯಕ್ತಿಕ ಶ್ರಮಕ್ಕೆ ಮಾತ್ರ. ಆದರಕ್ಕೆ ಸಿಹಿಯಾಗಿ—ಉದರಕ್ಕೆ ಕಹಿಯಾಗಿರುವ ವರದಿಗೆ ಸ್ವಾಗತ ಮಾತ್ರ ಉಂಟು. ಸರ್ಕಾರವ ಸಾಲದ ಅಂಕಿ ಸಂಖ್ಯೆಗಳು ತತ್ತರಿಸುವಂತಿವೆ ಎಂದು ಆರ್ಥಿಕ ಮಂತ್ರಿಗಳೇ ತತ್ತರಿಸಿ ಹೇಳುವಾಗ ವರದಿಗೆ ಅಭಿನಂದನೆ ಎಲ್ಲುಂಟು ಮಾರಾಯರೇ? ಎಂದು ಆರ್ಥಿಕ ಮಂತ್ರಿಗಳನ್ನೇ ಪ್ರಶ್ನಿಸುತ್ತೇನೆ. ವರದಿಯ ಅಂಕಿ ಸಂಖ್ಯೆಗಳ ಶಸ್ತ್ರ ಕ್ರಿಯೆಯಲ್ಲಿ ಗೆಲುವು ಸಂಪಾದಿಸಿದ್ದೀರಿ. ನಿಜ. ಆದರೆ ಆರ್ಥಿಕ ಭದ್ರತಾ ರಕ್ಷಣೆಯಲ್ಲಿ ಕಂಡೂ ಕಾಣದಂತೆ ಅಳಿವು ತಂದು ಕೊಂಡಿರುವುದೂ ನಿಜವೆಂದು ದೇಶದ

ಅರ್ಥಿಕ ವೈದ್ಯ ಶ್ರೀ ಹೆಗ್ಗಡೆಯವರಿಗೆ ವಿನಯದಿಂದ ಹೇಳಬಯಸುತ್ತೇನೆ. ಈ ವರದಿಗೂ ಕಾರ್ಯ ನಿರತ ಪತ್ರಿಕೋದ್ಯೋಗಿಯ ವಾರ್ಷಿಕ ಆಯವ್ಯಯದ ವರದಿಗೂ ಸಾಮ್ಯತೆ ಉಂಟೆಂದು ನಾನು ಭಾವಿಸಿದ್ದೇನೆ.

2-30 P.M,

ಗಡಿ ಗೊಂದಲ, ಭಾಷಾ ಗೊಂದಲ, ಅಧಿಕಾರಾಪೇಕ್ಷೆಯ ಗೊಂದಲ ತುರ್ತಾಗ್ರತೆಯ ಗೊಂದಲದಲ್ಲಿ ಆರ್ಥಿಕ ಗೊಂದಲ ಸ್ವಯಂಭಾವಿಕವಾಗಿಯೇ ನುಸುಳಿಕೊಂಡು ಬರುತ್ತದೆ. ಈ ಗೊಂದಲಗಳ ನಂಜನ್ನು ಉಣಬಲ್ಲ ನಂಜುಂಡನವತಾರ ಎಂದೋ ಏನೋ ? ಅಲ್ಲಿಯವರೆಗೂ ನಮ್ಮ ಪಾಲಿಗೆ ಬಂದದ್ದು ಪಂಚಾಮೃತವೆಂದು ಭಾವಿಸ ಬೇಕಾಗಿದೆ.

ಪ್ರಥಮ ಸಾರಿ ಆಯವ್ಯಯ ವರದಿಯನ್ನು ಮಾತೃಭಾಷೆಯಲ್ಲಿ ಮಂಡಿಸಿದ್ದಕ್ಕಾಗಿಯೂ, ತಾಲ್ಲೂಕ ಮಟ್ಟದಲ್ಲಿ ಕನ್ನಡವನ್ನೇ ಆಡಳಿತ ಭಾಷೆಯನ್ನಾಗಿ ಗೊತ್ತು ಮಾಡಿದ್ದಕ್ಕಾಗಿಯೂ ಸರ್ಕಾರವನ್ನು ಅಭಿನಂದಿಸುತ್ತೇನೆ. ಜಿಲ್ಲಾ ಮಟ್ಟ ಮತ್ತು ಸಮಗ್ರ ದೇಶದ ಮಟ್ಟದಲ್ಲಿಯೂ ಆಡಳಿತ ಭಾಷೆಯನ್ನು ತೀವ್ರ ಆಚರಣೆಗೆ ತರಲು ಪ್ರಯತ್ನಿಸಬೇಕೆಂದು ಅಪೇಕ್ಷಿಸುತ್ತೇನೆ.

ವರದಿಯಲ್ಲಿ ಉಪಯೋಗಿಸಿರುವ ಕೆಲವು ಕನ್ನಡ ಶಬ್ದಗಳು ತುಂಬಾ ಅವ್ಯವಹಾರಿಕವಾಗಿದ್ದು ಜನ ಸಾಮಾನ್ಯರಿಗೆ ಅರ್ಥವಾಗುವಂತಿಲ್ಲ. ಉದಾಹರಣೆಗೆ ರೇಖಾನುದಾನ ನಿರ್ಯಾತಾರ್ಥ ಆರ್ಜನ ಸಂಚಾಲನಾಲಯ—ಪುನರ್ವಿತ್ತನಿಗಮ—ಅನಂಚಿತ ರುಣ—ತದರ್ಥ ಸಂಕೀರ್ಣ—ರಾಜಪ್ರಭ ಅಗ್ನಿಮಧನ—ವಗ್ಗೈರೆ ಶಬ್ದಗಳಿಗೆ ಅರ್ಥವಾಗುವಂತೆ ಕನ್ನಡದ ಸುಲಭ ಶಬ್ದಗಳನ್ನು ಉಪಯೋಗಿಸಲು ಬರುತ್ತದೆ. ಮುಂದಿನ ವರದಿಯಲ್ಲಿ ಎಲ್ಲರಿಗೂ ಅರ್ಥವಾಗುವಂತಹ ಶಬ್ದಗಳನ್ನು ಉಪಯೋಗಿಸಲು ಪ್ರಯತ್ನಿಸಬೇಕೆಂದು ಹೇಳಬಯಸುತ್ತೇನೆ.

'ಹಾದಿಯಲ್ಲಿ ಹೋಗುತ್ತಿದ್ದ ಮಾರಿಯನ್ನು ಮನೆ ಹೊಕ್ಕು ಹೋಗು' ಎಂದು ಕರೆದಂತಾಗಿದೆ ಕೇಂದ್ರದವರ ತ್ರಿಭಾಷಾ ಕಾಯಿದೆ ಪ್ರಕರಣ. ಸದ್ದು ಗದ್ದಲವಿಲ್ಲದೆ ನಂತೋಷದಿಂದ ತಮಗೆ ತಾವೇ ಹಿಂದಿ ಕಲಿಯುತ್ತಿದ್ದವರಿಗೆ ತ್ರಿಭಾಷಾ ಕಾಯಿದೆ ಎಂಬ ಗೊಂದಲದಿಂದ ವೃಥಾ ಕೆರಳಿಸುವ ಕಾರ್ಯ ಮಾಡಿದ್ದಾರೆ ಕೇಂದ್ರದವರು. ಈ ಬಗ್ಗೆ ಅದೆಷ್ಟು ಗೊಂದಲ, ಅದೆಷ್ಟು ಪ್ರಾಣ ಹಾನಿ, ಎಷ್ಟು ನಷ್ಟ, ಎಷ್ಟು ಕಷ್ಟ—ದೇಶದ ದುರ್ದೈವ! ವಿವೇಕಿಗಳೂ ಸಹ ಅವಿವೇಕಿಗಳಂತೆ ಕುಣಿದಾಡಿದರು. ಹಾಲು ಹೇಗೆ ನಡೆಯುತ್ತಿತ್ತೊ ಹಾಗೆಯೇ ಇನ್ನೂ ಕೆಲವಾರು ವರ್ಷ ತಳ್ಳಿಕೊಂಡು ಹೋಗಿದ್ದರೆ ಇಷ್ಟೆಲ್ಲಾ ಅನಾಹುತಗಳು ನಡೆಯುತ್ತಿರಲಿಲ್ಲ. ಈ ಭಾಷಾ ಗೊಂದಲ ವಿಕೋಪಕ್ಕೂ ಹೋಗುತ್ತಿರಲಿಲ್ಲ. ಇದು ಎಷ್ಟು ವಿಕೋಪಕ್ಕೆ ಹೋಗಿದೆ ಎಂದರೆ 'ಯು ನಿಲ್ಲಿ ಬಾಯ್ ವೈ ಆರ್ ಯು ರಾಫಿಂಗ್ ಇನ್ ಇಂಗ್ಲೀಷ್ ? ರಾಫ್ ಇನ್ ಹಿಂದಿ' ಎಂದು ಉತ್ತರದವರೂ,' ಯು ಮ್ಯಾಡ್ ಮ್ಯಾನ್, ವೈ ಆರ್ ಯು ರಾಫಿಂಗ್ ಇನ್ ಹಿಂದಿ ? ರಾಫ್ ಇನ್ ಎನಿ ನದರ್ನ ರಾಂಗ್‌ವೇಜಿಸ್ ' ಎಂದು ದಕ್ಷಿಣದವರೂ ಹೇಳುವ ಸ್ಥಿತಿ ಬಂದಿದೆ. ಈಗಲೂ ಕಾಲ ಮಿಂಚಿಲ್ಲ. ರಾಷ್ಟ್ರಕ್ಕೆ ಒಂದು ಸಂಪರ್ಕ ಭಾಷೆ ಬೇಕೆಂದು ಎಲ್ಲರೂ ಒಪ್ಪಿದ್ದಾರೆ. ಇನ್ನು ಹತ್ತಾರು ವರ್ಷಗಳಲ್ಲಿ ತಾನು ತಾನಾಗಿಯೇ ಜನ ಸಾಮಾನ್ಯರೆಲ್ಲರೂ ಒಪ್ಪುವ ಸ್ಥಿತಿ ಬರಬಹುದು. ಆದುದರಿಂದ ಸದ್ಯಕ್ಕೆ ಕಾನೂನಿನ ಮೂಲಕ ಹೊರಿಸಬೇಕೆಂದಿರುವ ಭಾಷಾ ಪ್ರಯತ್ನವನ್ನು ಕೆಲವಾರು ವರ್ಷ ಮುಂದುವರಿಸುವುದು ಸೂಕ್ತವೆಂದು ಹೇಳಬಲ್ಲೆ. ಸದ್ಯಕ್ಕೆ ಇದೊಂದೇ ದಾರಿ. ಒತ್ತಾಯದ ತ್ರಿಭಾಷಾ ಸೂತ್ರದ ದಾರಿಯನ್ನೇ ಹಿಡಿದರೆ ಸಮಗ್ರ ಭಾರತದ ಐಕ್ಯತೆ ಮೂರಾ ಬಚ್ಚೆ ಆದೀತೆಂದು ಈಗ ನಡೆದ ಘಟನೆಗಳಿಂದ ಗೊತ್ತಾಗುತ್ತದೆ. ದೇಶದ ಐಕ್ಯತೆಗೆ ಭಂಗ ಬಾರದ ರೀತಿಯಲ್ಲಿ ಈ ಬಗ್ಗೆ ಕಾರ್ಯ ಪ್ರವೃತ್ತರಾಗಬೇಕಾದ್ದು ಪ್ರತಿಯೊಬ್ಬರ ಕರ್ತವ್ಯವಾಗಿದೆ.

ಮಹಾಜನ್ ವರದಿ ಕಾರ್ಯ ರೂಪಕ್ಕೆ ತರಲು ಸರ್ಕಾರಕ್ಕೆ ತುಂಬಾ ಉತ್ಸಾಹವಿರುವುದಕ್ಕೆ ಅಭಿನಂದಿಸ ಬೇಕಾಗಿದೆ. ಈಗ ಗಡಿ ಗೊಂದಲ ಕೂಡಲೇ ನಿರ್ಣಯವಾಗುವುದು ಉಭಯರಿಗೂ ಮೇಲಾಗಿ ಕೇಂದ್ರವರಿಗೂ ಕ್ಷೇಮ. ಆದರೂ ಈ ಬಗ್ಗೆ ಕೇಂದ್ರದ ವಿಳಂಬ ನೀತಿ ಅಪಾಯಕಾರಿ. ಮಹಾಜನ್ ವರದಿಯನ್ನು ವಿಳಂಬದ ತೊಟ್ಟಿಲಲ್ಲಿಟ್ಟು ರಾಷ್ಟ್ರದ ಏಕ ರೂಪ ಅಭಿಪ್ರಾಯ ಪಡೆಯ ಬೇಕೆಂಬ ಮರಾಠಿಯಲ್ಲಿ ಜೀ ಜೀ ಜೋಗುಳ ಹಾಡುವುದನ್ನು ಕೇಂದ್ರದವರು ನಿಲ್ಲಿಸಿ ಈ ಪ್ರಶ್ನೆಯನ್ನು ಕೂಡಲೇ ಬಗೆಹರಿಸಬೇಕೆಂಬುದು ಎಲ್ಲ ಕನ್ನಡಿಗರ ಆಗ್ರಹದ ವಿನಂತಿಯಾಗಿದೆ.

''ಭ್ರಷ್ಟಾಚಾರದ ನಿರ್ವಾಣಗಳು—ಸರ್ಕಾರಿ ಕಾರ್ಖಾನೆಗಳು...''ಕೆಲವು ಎಂದು ರಾವಣ ಹಾಡುವ ಸ್ಥಿತಿಯಲ್ಲಿ ಸರ್ಕಾರದ ಔದ್ಯೋಗಿಕ ಸಂಸ್ಥೆಗಳು ನಡೆಯುತ್ತಿವೆ ಎಂದು ಹೇಳಲು ವಿಷಾದಿಸುತ್ತೇನೆ. ಕೆಲವು ಕಾರ್ಖಾನೆಗಳಲ್ಲಿ ಲಾಭದ ಮಾತು ಹಾಗಿರಲಿ ಅಸಲಿಗೆ ಧಕ್ಕೆ ಬರುವ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಸ್ಥಿತಿಯಲ್ಲವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಹಾಕಿದ ಬಂಡವಾಳದ ಮೇಲೆ ಬಡ್ಡಿ ಶೇಕಡ ಎಂಟಾಣೆ ಬರದಿದ್ದರೆ ಅಂತಹ ಉದ್ಯೋಗವನ್ನು ಕೈಕೊಳ್ಳದಿರುವುದೇ ಲೇಸು. ಈಗಿರುವ ಕೈಗಾರಿಕಾ ಶಾಖೆಯು ಸಿಬ್ಬಂದಿಯೇ ಶಿರೋಭಾರವಾಗಿದೆ. ಹೀಗಿರುವಾಗ ಇಂಡಸ್ಟ್ರಿಯಲ್ ಕಮಿಷನರ್ ಅಂತಾ ಒಬ್ಬರನ್ನೂ ನೇಮಿಸುವ ಸೂಚನೆಯನ್ನು ಅರ್ಥ ಮಂತ್ರಿಗಳು ತಿಳಿಸಿದ್ದಾರೆ. ಮಿತವ್ಯಯದ ಹೆಸರಿನಲ್ಲಿ ಸಣ್ಣ ನೌಕರರ ಖೋತಾ ದೊಡ್ಡ ಹುದ್ದೆಗಳ ನೇಮಕ, ಇಂತಹ ಒಂದು ನೇಮಕ ಇನ್‌ಫರ್‌ಮೇಷನ್ ಖಾತೆಯಲ್ಲಿ ಈಗಾಗಲೇ ಆಗಿದೆ. ಈಗ ಇಂಡಸ್ಟ್ರಿಯಲ್ ಖಾತೆಗೆ ಸೂಚನೆ ಬಂದಿದೆ. ಸಣ್ಣ ಉಳಿತಾಯಗಳ ಸಹಸಂಡಾಲಕರ ನೇಮಕ ಮಾಡುವುದರಿಂದ ಅವರಿಗೆ ಎಷ್ಟು ಖರ್ಚು ಬರುತ್ತದೆ ? ಉಳಿತಾಯವೆಲ್ಲಾ ಅವರಿಗೇ ಖರ್ಚಾದೀತು, ಯೋಚಿಸಿರಿ ಎಂದು ಮಾತ್ರ ಹೇಳಬಲ್ಲೆ. ಸರ್ಕಾರದ ಆರ್ಥಿಕ ಪರಿಸ್ಥಿತಿ ವಿಷಮತೆಯಲ್ಲಿರುವಾಗ ಈ ನೇಮಕ ಯಾರಿಗೆ ಪ್ರೀತಿ ಎಂಬುದನ್ನು ಧನ ಮಂತ್ರಿಗಳೇ ಹೇಳಬೇಕಾಗಿದೆ. ಸರ್ಕಾರದ ಔದ್ಯೋಗಿಕ ಸಂಸ್ಥೆಗಳಲ್ಲಿ ತಿಪ್ಪ—ಎತರಜಿ—ಮಿತವ್ಯಯ ದಕ್ಷತೆಗಳಿಂದ ಕಾರ್ಯ ನಿರ್ವಹಿಸಿದರೆ ತುಂಬಾ ಲಾಭದಾಯಕವಾಗಿ ನಡೆಯುಬಲ್ಲವು. ಆ ರೀತಿ ಆಗುವಂತೆ ಸಂಬಂಧಪಟ್ಟ ಅಧಿಕಾರಿಗಳು ತ್ರಿಕರಣ ಪೂರ್ವಕ ನಡೆದಲ್ಲಿ ಆಯವ್ಯಯ ಇಳಿತದ ಪ್ರಶ್ನೆಯೇ ಬರುವುದಿಲ್ಲ. ಸಾಲ ಮಾಡುವುದು ಓವರ್ ಡ್ರಾಫ್ಟ್ ತೆಗೆಯುವುದು ಕ್ರಮೇಣ ಕಡಿಮೆಯಾಗುತ್ತದೆ. ದೇಶದ ಕರಾರುವಾಕ್ಕಾದ ಸಾಲ 342 ಕೋಟಿ 80 ಲಕ್ಷ; ಇದು ಲಿಮಿಟೆಡ್ (ನಿಯಮಿತ) ಸಂಖ್ಯೆ ಆಸ್ತಿ 427 ಕೋಟಿ ರೂಪಾಯಿ; ಇದು ಅನ್ ಲಿಮಿಟೆಡ್ (ಅನಿಯಮಿತ) ಸಂಖ್ಯೆ. ಇದೂ ಕರಾರು ವಾಕ್ ಆದಲ್ಲಿ ಆಸ್ತಿಗೂ ಸಾಲಕ್ಕೂ ಸರಿ ಹೊಂದಬಹುದಾದ್ದರಿಂದ ಇದು ತತ್ರಿನುವ ವಿಚಾರವೇ ಹೌದು. ಕಾರಣ ದುಂದು ಖರ್ಚುಗಳನ್ನು ಅಪವ್ಯಯವನ್ನೂ ತಗ್ಗಿಸಿ ಪ್ರಾಮಾಣಿಕತೆ, ಮಿತವ್ಯಯಗಳಿಗೆ ತುಂಬಾ ಗಮನ ಕೊಟ್ಟಲ್ಲಿ ಇಂದಲ್ಲ ನಾಳೆ ಈ ವಿಚಾರದಲ್ಲಿ ಗೆಲುವು ಕಾಣುತ್ತೇವೆ. ದೇಶದ ತಲಾ ವಾರ್ಷಿಕ ಆದಾಯ 421 ರೂಪಾಯಿಗೆ ಏರಿದೆ ಎಂದು ತಿಳಿಸಿದ ಕಡೆಯೇ, ತಲಾ ಸಾಲದ ಪ್ರಮಾಣವನ್ನು ತಿಳಿಸಿದ್ದರೆ, ಆದಷ್ಟೂ ಸಮಾಧಾನ ಪಟ್ಟುಕೊಳ್ಳಬಹುದಾತ್ತು. ಮುಂದಿನ ವರದಿಯಲ್ಲಿ ಈ ವಿಚಾರಕ್ಕೆ ಧನ ಮಂತ್ರಿಗಳು ಗಮನ ಕೊಡರೆಂದು ಆಶಿಸುತ್ತೇನೆ.

ಆಹಾರ ನಿಯಂತ್ರಣದ ಸರ್ಕಾರದ ರೀತಿ ನೀತಿಗಳಲ್ಲಿ ನಿರೀಕ್ಷಿಸಿದ ಯಶಸ್ಸು ದೊರೆತಿಲ್ಲ. ಜೆರೆ ನಿಯಂತ್ರಿಸುವ, ಕೊಳ್ಳುವ, ಮಾರುವ ವಿಚಾರದಲ್ಲಿ ನಿರ್ದಿಷ್ಟತೆ ಕಂಡು ಬಂದಿಲ್ಲ. ಧಾನ್ಯ ಸಂಗ್ರಹಣೆಯಲ್ಲಿ ತುಂಬಾ ಅಕ್ರಮ. ಅಪ್ಪಟ ಧಾನ್ಯ ಅಪರೂಪಕ್ಕೂ ಸರ್ಕಾರದ ಸಂಗ್ರಹದಲ್ಲಿ ದೊರೆಯುವುದಿಲ್ಲ. ಎರ್ರಾ ಬೆರಕೆ, ಕಲಬೆರಕೆ. ವ್ಯಾಪಾರಸ್ಥರಲ್ಲಿಯೂ ಅಷ್ಟೇ. ಒಮ್ಮೆ ಒಬ್ಬ ವ್ಯಾಪಾರಿಯನ್ನು ಇಷ್ಟೇಕೆ ಕಲಬೆರಕೆ ಇದು ಅನ್ಯಾಯವಲ್ಲವೇ ಎಂದು ಕೇಳಿದ್ದಕ್ಕೆ ನಾವು ಸಾವಿರ ಪಾಲಿಗೆ ಉತ್ತಮ, 100 ಸೇರಿಗೆ 10 ಸೇರು ಕಲ್ಲು ಮಣ್ಣು ಮರಳು ಸೇರಿಸುತ್ತೇವೆ. ಸರ್ಕಾರದ ಗೋದಾಮಿನಲ್ಲಿ 100 ಸೇರಿಗೆ 25 ಸೇರು ಕಲ್ಲು ಮರಳು ಸೇರಿಸುತ್ತಾರೆ. ಆ ಅನ್ಯಾಯದ ಮುಂದೆ ನಮ್ಮದೇನು ಮಹಾ ಎಂದು ಉತ್ತರ ಕೊಟ್ಟ ಪರೀಕ್ಷಿಸಿ ನೋಡಿದಲ್ಲಿ ಆಹಾರ ಮಂತ್ರಿಗಳಿಗೂ ಈ ಸತ್ಯಾಂಶ ಗೋಚರವಾಗುತ್ತದೆ. ಸರ್ಕಾರ ಮತ್ತು ವ್ಯಾಪಾರಸ್ಥರ ಮಧ್ಯೆ ಬಳಕೆದಾರರಿಗೆ ಆಗುತ್ತಿರುವ ತೊಂದರೆ ಕಿರುಕಳ ಶ್ರೀ ಜತ್ತಿಯವರಿಗೆ ಗೊತ್ತಿದ್ದರೂ ಸಹಾ ಅವರು ನಿಸ್ಸಹಾಯಕರಾಗಿದ್ದಾರೆ. ಈ ಬಗ್ಗೆ ಆದಷ್ಟೂ ಬಳಕೆದಾರರಿಗೆ ಅನುಕೂಲವಾಗಲು ಒಂದು ಅವಕಾಶವುಂಟು. ಆಹಾರ ಸಾಗಾಣಿಕೆಯ ಬಗ್ಗೆ ಜಿರ್ಲಾ ನಿರ್ಬಂಧಗಳನ್ನು ತೆಗೆದು ದೇಶದ ಗಡಿಯಲ್ಲಿ ಭದತೆ ಮಾಡಿದಲ್ಲಿ ಇಲ್ಲದವರು ಇದ್ದ ಕಡೆಯಿಂದ ಧಾನ್ಯ ಒದಗಿಸಿಕೊಳ್ಳಲು ಅವಕಾಶವಾಗಿ ಸ್ವಲ್ಪ ಮಟ್ಟಿಗೆ ಧಾರಣಿವಾಸಿಗಳು ತಗ್ಗಬಹುದು. ಈ ವಿಚಾರದ ಕಡೆ ತೀವ್ರ ಗಮನವನ್ನು ಅನ್ನ ಮಂತ್ರಿಗಳು ಕೊಡುತ್ತಾರೆಂದು ಭಾವಿಸಿದ್ದೇನೆ.

ಪಾನನಿರೋಧ ಸಡಿಲಸಿದ್ದರಿಂದ ಕೋಟ್ಯಂತರ ರೂಪಾಯಿ ವರಮಾನ ಬರುವಂತಾಗಿದೆ. ನಿಜ, ಆದರೆ ಇದು ತುಂಬಾ ಭ್ರಷ್ಟಾಚಾರದ ಇತಾಖೆ. ಈ ಬಾಬಿನಲ್ಲಿ ಭ್ರಷ್ಟಾಚಾರದಿಂದ ಕೋಟಿ ಗಟ್ಟಲೆ ಹಣ ಖೋತಾ ಬೀಳುತ್ತದೆ. ಹರಾಜು ವಗ್ಯೆರೆ ವಿಚಾರದಲ್ಲಿ ಕಾನೂನುಗಳನ್ನೇನೋ ಮಾಡಿದ್ದೀರಿ. ಆದರೆ ಅವನ್ನು ಕಟ್ಟುನಿಟ್ಟಾಗಿ ಪಾಲಿಸುವ ಅಧಿಕಾರಿಗಳಿದ್ದರೆ ಮಾತ್ರ ಬರುವ ಆದಾಯ ಸರಿಯಾಗಿ ಬರುತ್ತದೆ. ಕೆಲವರಿಂದ ಬರುವ ಲಕ್ಷಗಟ್ಟಲೆ ಹಣ ಹಾಗೆಯೇ ಉಳಿದಿದೆ. ಇದರ ಬಗ್ಗೆ ಆದ್ಯಾರಿ ಮಂತ್ರಿಗಳು ತುಂಬಾ ಗಮನ ಕೊಡಬೇಕೆಂದು ತಿಳಿಸಬಯಸುತ್ತೇನೆ. ಪಾನನಿರೋಧ ಸಡಿಲಸಿದರೂ ಪಾನನಿರೋಧ ಪ್ರಚಾರ ಸಮಿತಿಗಳನ್ನು ನೇಮಕ ಮಾಡಲಾಗುವುದು ಎಂದು ಆಯವ್ಯಯದ ವರದಿಯಲ್ಲಿ ಹೇಳಿದ್ದಾರೆ. ಈ ವಿಚಾರ ಕೇಳಿದವರೊಬ್ಬರು ಹೇಳಿದರು, ಇಂದು ಪಾನನಿರೋಧ ಪ್ರಚಾರ ಸಭೆಯಂತೆ! ಮುಖಂಡರ ಭಾಷಣ ಮೂರು ತಾಸಂತೆ॥ ನಿರೊ

ಕುಡಿದು ಬರುವೆ ತಾಜಾಸೇಂದಿ ಒಂದು ಗ್ಲಾಸು॥ ಎಂದು ಸಭೆಗೆ ಕರೆದ ಒಬ್ಬಾತನಿಗೆ ಅವನ ಮಿತ್ರ ಹೇಳಿದನಂತೆ. ಅಧರಕ್ಕೆ ಶಿವೋಹಂ। ಉದರಕ್ಕೆ ಪಾನೋಹಂ॥ ಎಂಬ ನೀತಿಯಿಂದ ಗಾಂಧೀಜಿಯವರು ಸ್ವರ್ಗದಲ್ಲಿ ಬೆರಗಾಗಿ ಕೇಳುತ್ತಿರಬಹುದೆಂದು ನನ್ನ ಭಾವನೆ.

ಸಂತಾನ ನಿರೋಧ ಪ್ರಚಾರದ ಬಗ್ಗೆ ಹಣ ಇಟ್ಟಿದ್ದಾರೆ. ಪ್ರಜಾಸಂಖ್ಯೆ ಮಿತಿಮೀರಿ ಬೆಳೆಯುತ್ತಿರುವ ಈ ಸಮಯದಲ್ಲಿ ಜನತೆ ಇದರ ಆಗುಹೋಗುಗಳನ್ನು ಅರಿತುಕೊಳ್ಳಬೇಕು. ಇಂತಹ ಸಾಮಾಜಿಕ ವಿಚಾರಗಳನ್ನು ಕಾನೂನು ಮೂಲಕ ಅಗ್ರಹ ಮಾಡಲು ಸಾಧ್ಯವಾಗರಾರದು ಎಂದು ಮಾತ್ರ ಹೇಳಬಯಸುತ್ತೇನೆ.

ವಿದ್ಯಾ ಇಲಾಖೆಗೆ ರಾಜ್ಯದ ಉತ್ಪನದಲ್ಲಿ ಶೇಕಡಾ 20 ರಷ್ಟು ಹಣ ವೆಚ್ಚವಾಗುತ್ತಿರುವುದು ರಾಷ್ಟ್ರದ ಪ್ರಗತಿಗೆ ತುಂಬಾ ನೆರವಾಗುವುದರಲ್ಲಿ ಸಂದೇಹವಿಲ್ಲ. ಸರ್ಕಾರದಿಂದ ಕೊಡಲ್ಪಡುವ ಹಣ ವಿಚಕ್ಷಣೆಯಿಂದ ಖರ್ಚಾಗಬೇಕು. ಈಗ ಎಲ್ಲೆಲ್ಲಿ ನೋಡಿದರೂ ಖಾಸಗಿಯವರಿಂದ ನಾಯಿ ಕೊಡೆಗಳಂತೆ ವಿದ್ಯಾ ಸಂಸ್ಥೆಗಳು ಹುಟ್ಟುತ್ತಿವೆ. ನ್ಯಾಯವಾಗಿ ನಡೆಸುವುದಾದರೆ ಖಾಸಗಿಯವರು ಶಾಲೆ ನಡೆಸುವುದು ತಪ್ಪೆಂದು ನಾನು ಹೇಳುವುದಿಲ್ಲ. ಕೆಲವರಂತೂ ಅದನ್ನು ಒಂದು ವ್ಯಾಪಾರ ವಾಗಿ ಮಾಡಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ವ್ಯಾಪಾರವಾಗಿ ಇಟ್ಟುಕೊಂಡಿರುವ ಎಷ್ಟೋ ವಿದ್ಯಾಸಂಸ್ಥೆಗಳಿವೆ. ಉಪಾಧ್ಯಾಯರಿಗೆ ಜೆಕ್ಕು ಮೂಲಕ ಹಣ ಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದರೂ, ಬರಿ ಪುಸ್ತಕದಲ್ಲಿ ರುಜು ಮಾಡಿಸಿಕೊಂಡು ಅರ್ಧ ಸಂಬಳವನ್ನು ಕೊಡುವ ಪರಿಪಾಠವನ್ನು ಇನ್ನೂ ಕೆಲವರು ಬಿಟ್ಟಿಲ್ಲ. ಉದಾಹರಣೆಗೆ ನೆಹರೂ ನಗರದ ಒಂದು ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹೀಗೆ ಮಾಡಿ ಐದಾರು ವರ್ಷಗಳಲ್ಲಿ ಲಕ್ಷಗಟ್ಟಲೆ ಆಸ್ತಿ ಮಾಡಿಕೊಂಡ. ಇಂತಹ ಎಷ್ಟೋ ಸಂಸ್ಥೆಗಳು ಬೆಂಗಳೂರಿನಲ್ಲಿವೆ. ಇವುಗಳ ರೀತಿನೀತಿಯ ಬಗ್ಗೆ ವಿದ್ಯಾ ಇಲಾಖೆ ಎಷ್ಟು ಜಾಗ್ರತ ವಾಗಿದ್ದರೂ ಸಾಲದು. ವಿದ್ಯಾ ಇಲಾಖೆಯ ಅಧಿಕಾರಿಗಳು ಅಂಥಾ ಸಂಸ್ಥೆಗಳ ಬಗ್ಗೆ ದೂರು ಕೊಟ್ಟರೂ ಗಮನಕ್ಕೆ ತೆಗೆದುಕೊಳ್ಳದೇ ಇರುವುದು ಬೇಜವಾಬ್ದಾರಿಯನ್ನು ತೋರಿಸುತ್ತದೆ. ಈ ವಿದ್ಯಾಧಿಕಾರಿಗಳ ಬೇಜವಾಬ್ದಾರಿಯನ್ನು ನಾನು ನಿಜವಾಗಿಯೂ ಕೂಡ ಈ ಸಭೆಯಲ್ಲಿ ಖಂಡಿಸ ಬಯಸುತ್ತೇನೆ.

ವ್ಯವಸಾಯದ ಇರಾಖೆಗೆ ಸರ್ಕಾರ ಗಮನ ಕೊಡುತ್ತಿದ್ದರೂ ಗಣನೀಯ ಪ್ರಮಾಣದಲ್ಲಿ ಪ್ರಗತಿಯಾಗಿಲ್ಲ. ಇದು ಸರ್ಕಾರ, ನಾವು, ನೀವು ಎಲ್ಲರೂ ಒಪ್ಪುವ ವಿಚಾರ. ವ್ಯವಸಾಯ ಇರಾಖೆಯಲ್ಲಿ ಯಾವ ಪ್ರಗತಿಯೂ ಸಾಧಿಸಿಲ್ಲವೆಂಬ ಮಾತನ್ನು ಕುರುಡರು ಸಹಾ ಹೇಳುವುದಿಲ್ಲ. ಆದರೆ ದೊಡ್ಡ ಜಮೀನ್ದಾರರಿಗೆ, ರೆಕಮೆಂಡೇಷನ್, ಪ್ರಭಾವ ಇರುವವರಿಗೆ ಎಲ್ಲಾ ಸೌಲಭ್ಯಗಳೂ ಜಾಗ್ರತೆ ದೊರೆಯುವಂತೆ ಕಾಣುತ್ತದೆ. ಸಣ್ಣ ಅಂದರೆ 5-10 ಎಕರೆ ಜಮೀನಿನವರಿಗೆ ವ್ಯವಸಾಯಕ್ಕೆ ಬೇಕಾದ ಉಪಕರಣಗಳು, ಕ್ರಿಮಿನಾಶಕ ಔಷಧಿ ಸರಿಯಾದ ಬಿತ್ತನೆಯ ಬೀಜ, ಇವು ಸಕಾಲದಲ್ಲಿ ದೊರೆಯುವುದು ದುರ್ಲಭವಾಗಿದೆ. ಇಂಥಾ ಪರಿಸ್ಥಿತಿ ಹೋಗಬೇಕು. ವ್ಯವಸಾಯಗಾರರಿಗೆ ಎಲ್ಲ ರೀತಿಯಿಂದಲೂ ಹೆಚ್ಚಿನ ಸಹಾಯ ಸಹಕಾರ ಸರಿಯಾದ ವೇಳೆಗೆ ದೊರೆಯುವಂತೆ ಮಾಡಲು ಸರ್ಕಾರ ಆದ್ಯ ಗಮನ ಕೊಡುತ್ತಾರೆಂದು ನಂಬಿದ್ದೇನೆ.

ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್—ಈ ಖಾತೆಗೆ ದೇಶದ ಆದಾಯದಲ್ಲಿ ಅರ್ಧ ಭಾಗ ಹಣ ಖರ್ಚಾಗುತ್ತಿದೆ. ಈ ಇರಾಖೆಯಲ್ಲಿ ಪ್ರಾಮಾಣಿಕರು ಕಡಿಮೆ ಪ್ರಮಾಣದಲ್ಲಿದ್ದಾರೆಂದು ಮಾತ್ರ ಹೇಳಿ ಸಂಬಂಧಪಟ್ಟ ಸಚಿವರು ಈ ಇರಾಖೆಯ ಕೆಲಸಕಾರ್ಯಗಳ ಕಡೆಗೆ ಹೆಚ್ಚಿಗೆ ಗಮನ ಕೊಡಲಿ, ಏನಾದರೂ ಅನ್ಯಾಯ ನಡೆದಿದೆ ಎಂದು ಈ ಸಭೆಯ ಸದಸ್ಯರು ಹೇಳಿದಾಗ ಪರಾಂಬರಿಸಿ ನೋಡಲು ಎಂದು ಮಾತ್ರ ಹೇಳಬಯಸುತ್ತೇನೆ.

ಬೆಂಗಳೂರು ನಗರ ಎಷ್ಟು ಬೃಹತ್ ನಗರವಾಗಿ ಬೆಳೆಯುತ್ತಿದೆಯೋ ಅಷ್ಟೇ ನಗರಾಡಳಿತದಲ್ಲಿ ಕುಂದುಕೊರತೆಗಳು ಬೃಹದಾಕಾರವಾಗಿ ಹೆಚ್ಚುತ್ತಿವೆ. ಕಾರ್ಪೊರೇಷನ್ನಿನಲ್ಲಿ ಕೆಲವು ವರ್ಷಗಳಾದರೂ ನೌಕರಿ ಮಾಡಿದರೆ ನಮ್ಮ ಪುಣ್ಯವೆಂದು ಬಹುತೇಕ ಭಾವನೆಯಿದೆ. ಅದರಂತೆ ಟ್ರಸ್ಟ್ ಬೋರ್ಡ್‌ನಲ್ಲಯೂ ಅಷ್ಟೇ. ಇನ್ನೂ ಕೆಲವು ಬೋರ್ಡ್‌ಗಳಿವೆ. ಇವುಗಳ ಹೆಸರು ಹೇಳುವುದು ಅನಾವಶ್ಯಕ. ಕಡಿಮೆ ಪ್ರಮಾಣದಲ್ಲಿರುವ ಪ್ರಾಮಾಣಿಕ ಅಧಿಕಾರಿಗಳಿಗೆ ನನ್ನ ವಂದನೆಗಳುಂಟು. ನಾವು ಪ್ರಜಾರಾಜ್ಯದಲ್ಲಿದ್ದೇವೆ, ಬ್ರಿಟಿಷ್ ಕಾಲದ ಐ. ಸಿ. ಎಸ್. ಅಲ್ಲ ಪ್ರಜಾರಾಜ್ಯದ ಐ. ಎ. ಎಸ್. ಎಂಬುದನ್ನು ಮರೆಯಬಾರದು. ಬೆಂಗಳೂರಿನ ಅಂದ, ಚಂದ ಸ್ವಚ್ಛತೆ ನೋಡಬೇಕಾದರೆ ಕೃಷ್ಣರಾಜೇಂದ್ರ ಮಾರ್ಕೆಟ್, ಮಂಡಿಪೇಟೆ, ಈ ಸ್ಥಳಗಳನ್ನು ನೋಡಬೇಕು.

ಕೃಷ್ಣರಾಜೇಂದ್ರ ಮಾರ್ಕೆಟ್ಟಿನಲ್ಲಿ ತರಕಾರಿ ಅಂಗಡಿಗಳ ಸ್ಥಳದಲ್ಲಿ ಕೋರ್ಟ್ ಹೈ-ರೇಂಜ್ ಕಟ್ಟಬೇಕೆಂದು, ಮಾನವೀಯತೆಯನ್ನು ನಿರ್ಲಕ್ಷಿಸಿ, ಅಲ್ಲಿನ ಅಂಗಡಿಗಳನ್ನು ಹೊಡೆದು ಹಾಕಿದರು. ಹಣ್ಣು, ಹಂಪಲು, ತರಕಾರಿ ಕೆಡದಂತೆ ಅನುಕೂಲಕ್ಕಾಗಿಯೇ ಮಾಡುತ್ತೀರೆಂದು ಇಟ್ಟುಕೊಳ್ಳೋಣ. ಜನತೆಗೆ ನಿತ್ಯೋಪಯೋಗಿ ವಸ್ತುಗಳನ್ನು ಮಾರುವ ಬಡ ತರಕಾರಿ ವ್ಯಾಪಾರಿಗಳ—ಅದರಲೂ

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ವಯಸ್ಸಾದ ಹೆಂಗಸರೇ ಹೆಚ್ಚಾಗಿದ್ದವರ ಮೇಲೆ ಬ್ರಹ್ಮಾಸ್ತ್ರ ಎತ್ತಿದರು. ಕೊರ್ಡ್ ಸ್ಪೋರೇಜಿಗೆ ಅದು ಉತ್ತಮವಾದ ಸ್ಥಳವೆಂದು ಹೇಳಿದ ತಜ್ಞರ ಸ್ಥಿಮಿತ ಬುದ್ಧಿಯ ಬಗ್ಗೆ ನನಗೆ ಸಂದೇಹ ಬರುತ್ತದೆ. ಕೋಲ್ಡ್ ಸ್ಪೋರೇಜಿಗೆ ಕಡಿಮೆ ಗುಡಿರಿ ಕಟ್ಟಣ ಮಾರುವ ಸ್ಥಳ ಪ್ರಶಸ್ತವಾಗಿದೆ. ಹೀಗಿದ್ದೂ ನ್ಯಾಯಸಮ್ಮತವಲ್ಲದ ತೀರ್ಮಾನ ಕಾರ್ಪೊರೇಷನ್ ಅಧಿಕಾರಿಗಳು ಕೈಕೊಂಡದ್ದಕ್ಕೆ ಬೆಂಗಳೂರೇ ಬೆರಗಾಗಿದೆ. ಈಗಲೂ ಕಾಲ ಮಿಂಚಿಲ್ಲ. ಅಧಿಕಾರಿಗಳು ಸರ್ವಾಧಿಕಾರಿಗಳಾಗಬಾರದು. ಈ ಬಗ್ಗೆ ಜನಾಭಿಪ್ರಾಯಕ್ಕೆ ಮನ್ನಣೆ ದೊರೆಯಲೆಂದು ಅಪೇಕ್ಷಿಸುತ್ತೇನೆ.

ಬೆಂಗಳೂರಿನ ಸ್ಲಮ್ ಏರಿಯಾಗಳು ಕಡಿಮೆಯಾಗುವುದು ಇರಲಿ, ಇನ್ನೂ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿವೆ. ಮನೆ ಕಟ್ಟಿಕೊಂಡವನೇ ಜಾಗದ ಒಡೆಯ ಎಂಬ ತತ್ವ ಬೆಂಗಳೂರಿನಲ್ಲಿದೆ. ಅಂತೆಯೇ ಪಕ್ಕದ ನಾಡುಗಳಿಂದ ವಲಸೆ ಬಂದು ಬೆಂಗಳೂರಿನಲ್ಲಿ ಅಸಂಖ್ಯಾತ ಜನರು ನೆಲಸುತ್ತಿದ್ದಾರೆ. ಭಾಷಾ ಚಳುವಳಿ ನಡೆಸುತ್ತ ಕನ್ನಡತನಕ್ಕೇ ಸಂಚುತರುತ್ತಿದ್ದಾರೆ. ಈ ವಿಚಾರ ಈಗ 10 ವರ್ಷಗಳಿಂದ ಹೇಳುತ್ತಿದ್ದೇನೆ. ಮನೆಗೆ ಮಾರಿ ಪರರಿಗೆ ಉಪಕಾರಿ. ಎಂಬಂತೆ ತಾವು ಆಗಬೇಡಿ. ಇದು ರಾಜಧಾನಿ, ಭದ್ರವಾಗಿರಬೇಕು. ಸರ್ಕಾರ ಈ ಬಗ್ಗೆ ನಿಗಾ ಕೊಡದಿದ್ದಲ್ಲಿ ಬೆಂಗಳೂರಿನ ಕನ್ನಡಿಗರು ಭವಿಷ್ಯದಲ್ಲಿ ಕಣ್ಣೀರು ಹಾಕಬೇಕಾದೀತು ಎಂದು ಮತ್ತೊಮ್ಮೆ ಎಚ್ಚರಿಸುತ್ತಿದ್ದೇನೆ.

ಕಾರ್ಪೊರೇಷನ್ ಬೆಂಗಳೂರು ನಗರದ ಕೆಲವು ದೊಡ್ಡ ರಸ್ತೆಗಳ ರಿಪೇರಿ, ರಸ್ತೆಗಳಿಗೆ ದೀಪ ಹಾಕುವ ಕೆಲಸವನ್ನು ಮಾಡುತ್ತಿದೆ. ಆದರೆ ಹೊಸದಾಗಿ ಸೇರಿಸಿಕೊಂಡಿರುವ ಕೆಲವು ಪ್ರದೇಶಗಳಿಗೆ ಅವಶ್ಯಕವಾದ ನಲ್ಲಿ ದೀಪ, ರಸ್ತೆ ಆಗಿಲ್ಲ. ಇದರ ಬಗ್ಗೆ ಸಂಬಂಧಪಟ್ಟ ನಚಿವರೊಡನೆ ಎಷ್ಟೋ ಬಾರಿ ಹೇಳಿದ್ದೇನೆ. ಮಾಡಿಸುವ ಭರವಸೆ ಕೊಡುತ್ತಿದ್ದಾರೆ. ಆದರೆ ಅಲ್ಲಿಯ ಅಧಿಕಾರಿಗಳು ನಾವು ಪ್ರಜಾಪ್ರತಿನಿಧಿಗಳೆಂಬುದನ್ನೇ ಮರೆತಿದ್ದಾರೆ. ಆ ಅಧಿಕಾರಿಗಳಿಗೆ ಎಷ್ಟು ಜವಾಬ್ದಾರಿ ಇದೆಯೋ, ಅದರ ಇಮ್ಮಡಿ ಜವಾಬ್ದಾರಿ ಪ್ರಜಾಪ್ರತಿನಿಧಿಗಳಾದ ನಮಗೂ ಇದೆ ಎಂಬುದನ್ನು ಅವರು ಗಮನದಲ್ಲಿಟುಕೊಂಡು ನ್ಯಾಯವಾಗಿ ಆಗಬೇಕಾದ ಕೆಲಸಗಳನ್ನಾದರೂ ಮಾಡಿಕೊಡುತ್ತಾರೆಂದು ನಂಬಿದ್ದೇನೆ.

ಬೆಂಗಳೂರಿನ ಹೃದಯ ಮಧ್ಯದಲ್ಲಿ ಇರುವ ಗುಬ್ಬಿ ಥಿಯೇಟರ್, ಕಾರ್ಪೊರೇಷನ್ ವಹಿಸಿಕೊಂಡ ಮೇಲೆ ಅವರ ಅಂದ ಚಂದ ಬೆಳೆಯುತ್ತದೆ, ರವೀಂದ್ರ ಕಲಾಕ್ಷೇತ್ರದಂತೆ ಇದು ಒಂದು ಕಲಾಕ್ಷೇತ್ರವಾಗುತ್ತದೆಂದು ಜನತೆ ಭಾವಿಸಿದ್ದರು. ನಮ್ಮ ದುರ್ದೈವ ಅದು ಟೂರಿಂಗ್ ಟಾಕೀಸ್ ಥಿಯೇಟರಿನ ಮಟ್ಟಕ್ಕೆ ಇಳಿಯುತ್ತಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಸೌಂದರ್ಯ, ಸಂಸ್ಕೃತಿಗಳ ದೃಷ್ಟಿಯಿಂದ ಈ ಥಿಯೇಟರನ್ನು ಉತ್ತಮ ಸ್ಥಿತಿಗೆ ತೀವ್ರತರವಂತೆ ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ನಿರೀಕ್ಷಿಸಿದ್ದೇನೆ.

ಸರ್ಕಾರ ನಡೆಸುತ್ತಿರುವ ಡೈರಿಯಲ್ಲಿನ ಬೆಣ್ಣೆಯಲ್ಲಿ ಹುಳು ಬೆರೆತಿದೆ ಎಂದು ನಿನ್ನೆ ಸಭೆಯ ಮತ್ತು ಸರ್ಕಾರದ ಗಮನಕ್ಕೆ ಒಬ್ಬ ಮಾನ್ಯ ವಿರೋಧಪಕ್ಷದ ಸದಸ್ಯರು ತಂದರು. ಇದು ಹೇಗಿದೆ ಎಂದರೆ, ಒಲ್ಲದ ಗಂಡನಿಗೆ ಪೊಸರಿನಲ್ಲಿ ಕಲ್ಲು ಸಿಕ್ಕಿತು ಎಂಬ ಗಾದೆಯಂತೆ ಕಾಂಗ್ರೆಸ್ಸಿನ ವಿರೋಧಿಗಳಿಗೆ ಬೆಣ್ಣೆಯಲ್ಲಿ ಹುಳು ಸಿಕ್ಕಿದೆ. ಅಲ್ಪಸ್ವಲ್ಪ ಅನ್ಯಾಯ ಆಗಿರಬಹುದು, ನಡೆದಿದೆ ಎಂದರೆ ಒಪ್ಪೋಣ, ಅಂಥದ್ದನ್ನು ಸರಿಪಡಿಸಲು ಸರ್ಕಾರವನ್ನು ಒತ್ತಾಯ ಪಡಿಸೋಣ. ಆದರೆ ಸತ್ಯಕ್ಕೆ ದೂರವಾದ ಮಾತುಗಳನ್ನು ಸದಸ್ಯರಾಗಿ ನಾವು ಇಲ್ಲಿ ಬಂದು ಆಡಬಾರದು.

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಅಲ್ಲಿಗೆ ಹೋಗಿ ನೋಡಿಕೊಂಡು ಬನ್ನಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ನೋಡಿದ್ದೇನೆ, ತಂದಿದ್ದೇನೆ, ತೆಗೆದುಕೊಂಡು ಬಂದು ತಂದಿದ್ದೇನೆ. ಶೆಟ್ಟರು ಸ್ಟಾಕ್ ಮಾಡಿದ್ದರು ಎಂದು ಕಾಣುತ್ತದೆ. ಅದನ್ನು ಇಲ್ಲಿ ತಂದು ತೋರಿಸಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಶೆಟ್ಟರಲ್ಲ ಸ್ಟಾಕ್ ಮಾಡಿದ್ದು, ಡೈರಿಯವರೇ ಸ್ಟಾಕ್ ಮಾಡಿದ್ದಾರೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ.—ಮಾನ್ಯ ಹಿರಿಯ ಸದಸ್ಯ ಸಹೋದರರೊಬ್ಬರು ವಿದ್ಯಾವಂತರೆಲ್ಲರಿಗೂ ರಜ್ಜೆ ತುಂಬಿ ಕೆಲಸ ಕೊಟ್ಟಿದ್ದೀರಾ ಎಂದು ಪ್ರಶ್ನೆ ಹಾಕಿದರು. ಆ ರೀತಿ ಕೇಳಿದ ಸದಸ್ಯರು ಈ ಕಡೆ ಇದ್ದಿದ್ದರೆ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುತ್ತಿರಲಿಲ್ಲ. ಓದಿದವರೆಲ್ಲರಿಗೂ ಕೂಡ ಕೆಲಸವನ್ನು ಕೊಡಲಿಕ್ಕೆ ಸಾಧ್ಯವಿಲ್ಲ. ಈ ಕಡೆ ಇದ್ದಾಗ ಏನನ್ನು ಅವರು

ಮಾಡಿದ್ದಾರೆ ಅಲ್ಲಿ ಹೋಗಿ ಅದನ್ನೇ ಆ ಕಡೆಯವರಿಗೆ ಹೇಳುತ್ತಾರೆ. ಇಂಥ ಪರಿಪಾಠವೇನಿವೆ ಅದಕ್ಕೆ ಪಕ್ಷ ಬದಲಾವಣೆ ಎಂದು ಹೇಳುವುದು. ಅದನ್ನು ಎಲ್ಲರೂ ಹೇಳುತ್ತಿದ್ದಾರೆ. ಇದಾಗ ಬಾರದು ನಾವು ಸತ್ಯಾಂಶಗಳನ್ನು ಪರೀಕ್ಷೆ ಮಾಡಿ ರಚನಾತ್ಮಕವಾದ ಟೀಕೆಗಳನ್ನು ಮಾಡೋಣ. ನಾವು ಕೂಡ ಕಾಂಗ್ರೆಸ್ಸಿನವರಾದ ಮಾತ್ರಕ್ಕೆ ನಾವು ಮಾಡಿದ ತಪ್ಪುಗಳನ್ನೆಲ್ಲ ಮುಚ್ಚಿಟ್ಟುಕೊಳ್ಳಬೇಕೆಂಬ ಉದ್ದೇಶವಿಲ್ಲ. ಆ ರೀತಿ ನಾವು ಮಾಡುತ್ತಿಲ್ಲ. ಇನ್ನು ಮೇಲಾದರೂ ಮಾನ್ಯ ವಿರೋಧ ಪಕ್ಷದ ಸದಸ್ಯರು ರಚನಾತ್ಮಕವಾದ ಟೀಕೆಗಳನ್ನು ಮಾಡಲಿ ಎಂದು ನಾನು ಹಾರೈಸುತ್ತೇನೆ.

ಕೊನೆಯದಾಗಿ ಅಡಳಿತದಲ್ಲಿ ಕೃಪಾಪಿನಿಯೋಗ ನಿಲ್ಲಬೇಕು. ದಾಕ್ಷಿಣ್ಯಪರತೆ ಹೋಗಬೇಕು. ಹುದ್ದೆಗಳಿಗೆ ನೇಮಕ, ವರ್ಗಾವರ್ಗಿ, ಪುನರ್ನೇಮಕ ಇವುಗಳಲ್ಲಿ ಮುಖ ನೋಡಿ ಮಣೆಹಾಕುವುದು ಅವಷ್ಟು ತಪ್ಪಬೇಕು. ನೌಕರರ ಅಡಳಿತ ಲೋಪದೋಷಗಳ ವಿಚಾರಣೆ ಇದ್ದರೆ ಅಂತಹವುಗಳು ಅದಷ್ಟು ತುರ್ತು ತೀರ್ಮಾನವಾಗಬೇಕು. ಇದನ್ನು ಮೈಸೂರು ವಿಜಿಲೆನ್ಸ್ ಕಮಿಟಿಯವರೇ ಸರಕಾರಕ್ಕೆ ವಿಳಂಬವಾಗಬಾರದೆಂದು ತಿಳಿಸಿದ್ದಾರೆ. ಆದರೂ ಗಣನೀಯವಾಗಿ ತೀರ್ಮಾನ ಕೈಕೊಳ್ಳುವುದಕ್ಕೆ ತುಂಬಾ ವಿಳಂಬವಾಗುತ್ತಿರುವುದಕ್ಕೆ ಎಷ್ಟೊ ಉದಾಹರಣೆಗಳಿವೆ. ವಿಳಂಬ ನೀತಿಯಿಂದ ಸಂಬಂಧ ಪಟ್ಟವರಿಗಾಗುವ ಕಷ್ಟನಷ್ಟಗಳಿಗೆ ಹೊಣೆ ಯಾರು ? ಎಂದು ಸಾಭಾವಿಕವಾಗಿ ಪ್ರಶ್ನಿಸಬೇಕಾಗುತ್ತದೆ. ಇಂತಹ ವಿಚಾರಗಳನ್ನು ಸದಸ್ಯರು ಸರಕಾರದ ಗಮನಕ್ಕೆ ತಂದರೆ ಉತ್ತರ ಸರಕಾರಿ ಭಾಷಾಪ್ರಯೋಗ ನಲ್ಲದು ಎಂದು ಬಹು ವಿನಯದಿಂದ ನಲಹೆ ಮಾಡುತ್ತಿದ್ದೇನೆ.

ಇನ್ನೊಂದು ಮಹತ್ವದ ವಿಚಾರ ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಮಹಿಳೆಯರಿಗೆ ನೌಕರಿ, ಸ್ಥಾನ—ಮಾನಗಳನ್ನು ಕೊಡುವ ಬಗ್ಗೆ ಸರಕಾರ ನಿರ್ಲಕ್ಷಿಸುತ್ತಾ ಬಂದಿದೆ ಎಂದು ವಿಷಾದದಿಂದ ಹೇಳುತ್ತೇನೆ. ಖಾನಗಿಯವರಿಗೆ ಕೊಡುವ ಗೌರವ ಸ್ಥಾನಮಾನಗಳು ಅಂದರೆ—ಟ್ರಸ್ಟ್‌ಬೋರ್ಡ್, ಹೌಸಿಂಗ್‌ಬೋರ್ಡ್, ಖಾದಿಬೋರ್ಡ್ ವಗೈರೆ ಪುರುಷರಿಗೇ ವಿಶಾಲವಾಗಿ ಅನೇಕರು ಖಾಯಂ ಆಗಿ ಇವ್ವಾರೆ. ಇದು ಅನ್ಯಾಯ. ದೇಶದ ಜನಸಂಖ್ಯೆಯಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿರುವವರನ್ನು ನಿರ್ಲಕ್ಷಿಸುವುದು ಅನ್ಯಾಯವೆಂದು ಹೇಳಬಯಸುತ್ತೇನೆ. "ಸತಿಗಣದ ನಿಸ್ವಾರ್ಥ ಸೇವೆಯು ಭಾರವಿಸಿದು ಪುರುಷರ ಭುಜದಮೇಲೆ, ಇದರಿಂದ ವಿಮೋಚನೆಯಾಗದತನಕ ಸಕಲ ನಕೀರ್ತಿಮರ್ಹತಿ" ಎಂದು ಹೇಳಿ ಆಯವ್ಯಯವನ್ನು ಸ್ವಾಗತಿಸುತ್ತೇನೆ.

CHAIR'S RULING *re*: STATEMENT OF THE MINISTER FOR CO-OPERATION IN THE LEGISLATIVE COUNCIL.

Mr. DEPUTY SPEAKER.—Before I call upon other hon'ble members, I will give the ruling on the privilege matter raised by Sri H. N. Nanje Gowda.

On March 2nd 1968 hon'ble Member Sri H. N. Nanje Gowda raised a question of privilege on the statement reported to have been made by the Minister for Development and Co-operation in the Ligislative Council on 29th February 1968 in which the Minister is reported to have said inter alia that the members of the opposition in the lower House were indulging in creating disturbances and confusion resulting in wastage of time. This statement is alleged to have been made by the Minister in the context of the availability of time for the discussion of the Mysore Panchayatraj Bill. Various arguments were advanced by the members of the opposition who supported the question of privilege. Several authorities were also cited. The Minister for Law and Parliamentary Affairs also cited authorities questioning the competence of this House to raise a question of privilege on the proceedings of the upper House.